

ಪ್ರಗತಿ ಸಾಧಿಸುವ ಸಾಧ್ಯತೆಗಳನ್ನು ಕಂಡುಕೊಂಡಿದ್ದಾರೆ. ನ್ಯಾನೋ ತಂತ್ರಜ್ಞಾನದಲ್ಲಿ ಇತ್ತೀಚಿನ ಸಂಶೋಧನೆಗಳು ಎಷ್ಟು ಆಳಕ್ಕೆ ಇಳಿದಿವೆಯೆಂದರೆ, ಈ ತಂತ್ರಜ್ಞಾನದ ಮೂಲಕ ನಶಿಸಿ ಹೋದ ಅನೇಕ ಸಸ್ಯ ಮತ್ತು ಪ್ರಾಣಿ ಸಂತತಿಗಳಿಗೆ ಮರುಜೀವವನ್ನೂ ನೀಡಲು ಸಾಧ್ಯ ಎಂದು ವಿಜ್ಞಾನಿಗಳು ಹೇಳುತ್ತಿದ್ದಾರೆ!

### ನ್ಯಾನೋ ರಾಜಧಾನಿ ಬೆಂಗಳೂರು

ನ್ಯಾನೋ ವಿಜ್ಞಾನ ಮತ್ತು ತಂತ್ರಜ್ಞಾನದ ರಾಜಧಾನಿಯಾಗಿ ಬೆಂಗಳೂರು ಹೊರಹೊಮ್ಮಿದೆ. ಸಾಕಷ್ಟು ಸಂಶೋಧನೆ ಮತ್ತು ಅಭಿವೃದ್ಧಿ ಇಲ್ಲಿ ನಡೆಯುತ್ತಿರುವುದು ಮಾತ್ರವಲ್ಲ, ಕರ್ನಾಟಕ ಸರ್ಕಾರವೂ ಇದಕ್ಕೆ ಸಾಕಷ್ಟು ಉತ್ತೇಜನ ನೀಡುತ್ತಿದೆ. ಭಾರತ ಸರ್ಕಾರವು ಬೆಂಗಳೂರು ಮತ್ತು ಚಂಡೀಗಢದಲ್ಲಿ ನ್ಯಾನೋ ತಂತ್ರಜ್ಞಾನಕ್ಕೆ ಸಂಬಂಧಿಸಿದ ಎರಡು ಸಂಸ್ಥೆಗಳನ್ನು ಸ್ಥಾಪಿಸಿದೆ. ಅಮೆರಿಕ, ಜಪಾನ್, ಜರ್ಮನಿ, ಚೀನಾದೊಂದಿಗೆ ಭಾರತವೂ ಈ ಕ್ಷೇತ್ರದಲ್ಲಿ ದಾಪುಗಾಲಿಡುತ್ತಿದೆ. ನಮ್ಮಲ್ಲಿ ಔಷಧ, ಕೃಷಿ, ಆಹಾರ ಉತ್ಪಾದನೆ, ಎಲೆಕ್ಟ್ರಾನಿಕ್ಸ್, ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿ ನಡೆದಿದೆ. ದೇಶದಲ್ಲಿ ವಿಶೇಷವಾಗಿ ಬೆಂಗಳೂರು ಸುತ್ತಮುತ್ತ ನ್ಯಾನೋ ತಂತ್ರಜ್ಞಾನ ಉದ್ಯಮಗಳು ಬೇರು ಬಿಡುತ್ತಿವೆ. ಸಾಕಷ್ಟು ಉತ್ಪನ್ನಗಳು ತಯಾರಾಗುತ್ತಿವೆ. ದೊಡ್ಡ ದೊಡ್ಡ ಉದ್ಯಮಿಗಳೂ ಈ ಕ್ಷೇತ್ರಕ್ಕೆ ಕಾಲಿಡುತ್ತಿದ್ದಾರೆ.

ವಿಜ್ಞಾನದಲ್ಲಿ ಯಾವುದೇ ಒಂದು ಪರಿಕಲ್ಪನೆ ಬೀಜ ರೂಪದಲ್ಲಿರುತ್ತದೆ, ಅದನ್ನು ಬಿತ್ತಿದ್ದರೆ ಅಕ್ಕಪಕ್ಕದಲ್ಲಿ ಹೆಚ್ಚು ಹೆಚ್ಚು ಸಸಿಗಳು ಹುಟ್ಟುತ್ತವೆ. ಬಳಿಕ ಅದೊಂದು ವನವಾಗುತ್ತದೆ. ನ್ಯಾನೋ ತಂತ್ರಜ್ಞಾನದಲ್ಲಿ ಅದೇ ಕೆಲಸ ಆಗುತ್ತಿದೆ. ಭಾರತ ಮುಂದೊಂದು ದಿನ ಜಾಗತಿಕ ಮಟ್ಟದಲ್ಲಿ ಮುಂಚೂಣಿಗೆ ತಲುಪುತ್ತದೆ ಎಂಬುದು ನ್ಯಾನೋ ವಿಜ್ಞಾನ ಕ್ಷೇತ್ರದಲ್ಲಿ ಇಳಿ ವಯಸ್ಸಿನಲ್ಲೂ ಸಂಶೋಧನೆ ನಡೆಸುತ್ತಿರುವ ಪ್ರೊ.ಸಿ.ಎನ್.ಆರ್.ರಾವ್ ಅವರ ಖಚಿತ ಅಭಿಪ್ರಾಯ.

ನ್ಯಾನೋ ತಂತ್ರಜ್ಞಾನದ ಇತ್ತೀಚಿನ ಕೆಲವು ಸಾಧನೆಗಳನ್ನು ಈ ರೀತಿ ಪಟ್ಟಿ ಮಾಡಬಹುದು:

## 1 ಹನಿ ರಕ್ತದಿಂದ ಹೃದಯಾಘಾತದ ಸೂಚನೆ

ಕೆಲವು ಬಿಂದುಗಳಷ್ಟು ರಕ್ತವನ್ನು ಸೆನ್ಸರ್ ಚಿಪ್‌ನೊಳಗೆ ಹಾಯಿಸಿದರೆ ಸಾಕು, ಆ ಚಿಪ್ ಹೃದಯಾಘಾತದ ಸೂಚನೆಯನ್ನು ಮೊದಲೇ ನೀಡುತ್ತದೆ. ಮೊಹಾಲಿಯ ಇನ್‌ಸ್ಟಿಟ್ಯೂಟ್ ಆಫ್ ನ್ಯಾನೊ ಸೈನ್ಸ್ ಅಂಡ್ ಟೆಕ್ನಾಲಜಿ ಈ ಸಾಧನವನ್ನು ಅಭಿವೃದ್ಧಿಪಡಿಸಿದೆ. ಈ ಪುಟಾಣಿ ಚಿಪ್ ಬಗ್ಗೆ ವಿಜ್ಞಾನಿ ಡಾ. ಪ್ರಿಯಾಂಕ ಹಲವು ವಿವರಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ.

‘ಹೃದಯದ ಕಾರ್ಯ ನಿರ್ವಹಣೆ ಮಹತ್ವದ ಸಂಗತಿ. ಈ ಕಾರ್ಯ ಸರಿಯಾಗಿ ನಡೆಯುತ್ತಿದೆ ಎಂಬುದನ್ನು ತಿಳಿಯಲು ಈ ಚಿಪ್ ಸಹಾಯಕವಾಗುತ್ತದೆ. ಇದರ ವಿಶೇಷತೆ ಎಂದರೆ ರಕ್ತದಿಂದ ಪ್ಲಾಸ್ಮಾವನ್ನು ಬೇರ್ಪಡಿಸುತ್ತದೆ. ಹೃದಯದ ಕೋಶಗಳಲ್ಲಿ ಮತ್ತು ಪ್ರೊಟೀನ್‌ಗಳಲ್ಲಿ ಆಗುವ ಸಣ್ಣ–ಪುಟ್ಟ ವ್ಯತ್ಯಾಸಗಳನ್ನೂ ಇದು ಪತ್ತೆ ಮಾಡುತ್ತದೆ. ಈ ವ್ಯತ್ಯಾಸಗಳ ನಮೂನೆಯನ್ನು ವರ್ಗೀಕರಿಸುತ್ತದೆ ಮತ್ತು ದಾಖಲಿಸುತ್ತದೆ. ಈ ಮೂಲಕ ವ್ಯಕ್ತಿಯೊಬ್ಬನಲ್ಲಿ ಹೃದಯಾಘಾತದ ಸೂಚನೆಯನ್ನು ಮೊದಲೇ ಸುಲಭವಾಗಿ ತಿಳಿದುಕೊಳ್ಳಬಹುದು’ ಎನ್ನುತ್ತಾರೆ ಡಾ. ಪ್ರಿಯಾಂಕ.

‘ಒಂದು ವೇಳೆ ಎದೆನೋವಿಗೆ ತುತ್ತಾದರೆ ಈ ಸೆನ್ಸರ್‌ನಲ್ಲಿ ರಕ್ತದ ಬಿಂದುಗಳನ್ನು ಹಾಕಿ ಪರೀಕ್ಷಿಸಿದರೆ ಅದು ಹೃದಯಾಘಾತದ ಪೂರ್ವಸೂಚನೆ ಹೌದೇ ಅಲ್ಲವೇ ಎನ್ನುವುದನ್ನು ಮೊದಲೇ ತಿಳಿದುಕೊಳ್ಳಬಹುದು. ಈಗಾಗಲೇ ಕೆಲವು ಬಗೆಯ ಸೆನ್ಸರ್‌ಗಳು ಮಾರುಕಟ್ಟೆಯಲ್ಲಿ ಇವೆ. ಅವುಗಳಲ್ಲಿ ಸಾಮಾನ್ಯವಾಗಿ ಒಂದೇ ಮಾರ್ಕರ್ ಇರುತ್ತದೆ. ನಾವು ನ್ಯಾನೊ ತಂತ್ರಜ್ಞಾನ ಬಳಸಿ ನಾಲ್ಕು ಮಾರ್ಕರ್‌ಗಳನ್ನು ಅಳವಡಿಸಿದ್ದೇವೆ. ಮಾರ್ಕರ್ ಎಂದರೆ ರೋಗಕ್ಕೆ ಕಾರಣವಾಗುವ ಅಂಶಗಳನ್ನು ಪತ್ತೆ ಮಾಡುವುದು’ ಎನ್ನುತ್ತಾರೆ ಡಾ. ಪ್ರಿಯಾಂಕ.

ಸದ್ಯಕ್ಕೆ 72 ಗಂಟೆಗಳಷ್ಟು ಮುಂಚಿತವಾಗಿ ಹೃದಯಾಘಾತ ತಿಳಿಸುವ ಸೆನ್ಸರ್ ಅಭಿವೃದ್ಧಿಪಡಿಸಲಾಗಿದೆ. ಆರು ತಿಂಗಳಿಗೂ ಮೊದಲೇ ಹೃದಯಾಘಾತದ ಸೂಚನೆ ನೀಡುವ ಸೆನ್ಸರ್‌ಅನ್ನು ಈಗ ಅಭಿವೃದ್ಧಿ ಪಡಿಸಲಾಗುತ್ತಿದೆ. ಈ ಸೆನ್ಸರ್‌ಗೆ ಪೇಟೆಂಟ್ ಪಡೆಯಲು ಕೂಡಾ ಈಗಾಗಲೆ ಅರ್ಜಿ ಸಲ್ಲಿಸಲಾಗಿದೆ.

ಸೆನ್ಸರ್‌ಗಳಲ್ಲಿರುವ ಮಾರ್ಕರ್ ಅಥವಾ ಆಣ್ವಿಕ ನಿರ್ದಿಷ್ಟ ಬಗೆಯ ಕೋಶಗಳನ್ನು ಗುರುತಿಸಿ ಪ್ರತ್ಯೇಕಿಸುತ್ತದೆ. ಹೃದಯಾಘಾತದ ಸೂಚನೆ ಪಡೆಯಲು ನಿರ್ದಿಷ್ಟ ಬಗೆಯ ಪ್ರೊಟೀನ್ ಬಳಸಲಾಗುತ್ತದೆ. ಈ ಪ್ರೊಟೀನ್ ಹೃದಯಾಘಾತಕ್ಕೆ ಕಾರಣವಾಗುವ ಅಂಶವನ್ನು ಪತ್ತೆ ಮಾಡುತ್ತದೆ.




ನಮ್ಮ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಿದ **ಶ್ರೀ ಬಿ.ಹೆಚ್.ಆಚಾರ್ಯ ಗುರೂಜಿ** ಅವರಿಗೆ ನಮ್ಮ ಅಭಿನಂದನೆಗಳು

ತುಂಬಾ ಖುಷಿ ಹಾಗೂ ಸಂತೋಷ ಆಗುತ್ತೆ ಶ್ರೀಶ್ರೀ ಆಚಾರ್ಯ ಗುರೂಜಿಯವರ ಬಗ್ಗೆ ಮಾತನಾಡೋಕೆ ಯಾಕೆಂದ್ರೇ ಇವತ್ತು ನಮಗೆ ಸ್ವಂತ ಉದ್ಯೋಗ, ಸ್ವಂತ ಮನೆ ಜೊತೆಗೆ ಆರೋಗ್ಯ ಭಾಗ್ಯ, ಸುಖಃ, ಸಂತೋಷ, ನೆಮ್ಮದಿ ಇದೆ ಅಂದ್ರೆ ಅದಕ್ಕೆಲ್ಲಾ ಕಾರಣ ಶ್ರೀಶ್ರೀ ಬಿ.ಹೆಚ್.ಆಚಾರ್ಯ ಗುರೂಜಿಯವ್ರು. ನಾವು ಸುಮಾರು 10 ವರ್ಷದಿಂದ ಸ್ವಂತದ್ದಾಗಿ 3–4 ಬಿಸ್‌ನೆಸ್ ಮಾಡಿದ್ರೂ ಯಾವ ಬಿಸ್‌ನೆಸ್ ಕೂಡ ಕೈ ಹಿಡಿಯಲಿಲ್ಲ ಎಷ್ಟೇ ಪ್ರಯತ್ನ ಪಟ್ರೂ ಬಿಸ್‌ನೆಸ್‌ಲ್ಲಿ ಇಂಪ್ರೂವ್‌ಮೆಂಟ್ ಆಗದೇ ಸಿಕ್ಕಾಪಟ್ಟೆ ಸಾಲ ಮಾಡ್ಕೊಂಡು ಬಿಟ್ಟಿದ್ವಿ ತುಂಬಾ ಅಂದ್ರೆ ತುಂಬಾ ಕಷ್ಟ ಅನುಭವಿಸಿದ್ದೀವಿ, ಒಂದು ಹೊತ್ತಿನ ಊಟಕ್ಕೂ ಕೂಡಾ ನಮ್ಮಲ್ಲಿ ಹಣ ಇರ್ತಿರ್ಲಿಲ್ಲಾ ಎಷ್ಟೋ ಸಾರಿ ಈ ಜೀವವೇ ಬೇಡಾ ಅಂತಾ ಸಾಯೋಕೆ ಕೂಡಾ ಹೋಗಿದ್ವಿ ಆದರೇ ಮಕ್ಕಳ ಮುಖ ನೋಡ್ಕೊಂಡು ಹೇಗೋ ಜೀವನ ಸಾಗಿಸ್ತಾ ಇದ್ವಿ. ಅಂತಹ ಕಷ್ಟಕರ ಸಮಯದಲ್ಲಿ ನಮಗೆ ದೇವರ ಹಾಗೆ ಕೈಹಿಡಿದು ಕಾಪಾಡಿದವ್ರೂ ಅಂದ್ರೆ ಶ್ರೀಶ್ರೀ ಬಿ.ಹೆಚ್.ಆಚಾರ್ಯ ಗುರೂಜಿಯವ್ರು. ನಾವೊಂದ್ಸಲ ಶ್ರೀ ಅಷ್ಟಲಕ್ಷ್ಮೀ ಜ್ಯೋತಿಷ್ಯ ಮಂದಿರ ಶ್ರೀಶ್ರೀ ಬಿ.ಹೆಚ್.ಆಚಾರ್ಯ ಗುರೂಜಿಯವರನ್ನು ಭೇಟಿ ಮಾಡಿದ್ವಿ ನಮ್ಮ ಎಲ್ಲಾ ಕಷ್ಟಕಾರ್ಪಣ್ಯಗಳನ್ನು ಅರ್ಥೈಸಿಕೊಂಡ ಗುರೂಜಿಯವ್ರು ನಮಗೆ ಪರಿಹಾರ ತಿಳಿಸಿದ್ರು ಎಷ್ಟೇ ಕಷ್ಟ ಆದ್ರೂ ಚಿಂತೆಯಿಲ್ಲ ಅಂತಾ ಹೇಳಿ ಗುರೂಜಿವ್ರೂ ಹೇಳಿದ ಪರಿಹಾರ ಮಾಡಿಕೊಂಡು ಬಂದ್ವಿ ನಂತರ ಕೆಲವೇ ದಿನಗಳಲ್ಲಿಯೇ ನಮ್ಮ ಎಲ್ಲಾ ಸಮಸ್ಯೆಗಳು ಶಾಶ್ವತ ಪರಿಹಾರ ಆಯ್ತು ಈಗ ನಾವೇ 2 ಬಿಸ್‌ನೆಸ್ ಮಾಡ್ತಾ ಇದ್ದೀವಿ. ಬಿಸ್‌ನೆಸ್ ತುಂಬಾ ಇಂಪ್ರೂವ್‌ಮೆಂಟ್ ಇದೇ. ಸಾಲ ಎಲ್ಲಾ ತೀರಿತು, ನಾವೇ ಒಂದಿಷ್ಟು ಜನಕ್ಕೆ ಕೆಲಸ ಕೂಡಾ ಕೊಟ್ಟಿದ್ವಿ. ಈಗ ನಮಗೆ ಯಾವ ಸಮಸ್ಯೆಗಳಿಲ್ಲದೇ ನೆಮ್ಮದಿಯಾಗಿ ಇದ್ದೀವಿ ಇಂಥಾ ನೆಮ್ಮದಿಯ ಬದುಕನ್ನು ಕಲ್ಪಿಸಿಕೊಟ್ಟಂತಹ ಶ್ರೀಶ್ರೀ ಆಚಾರ್ಯ ಗುರೂಜಿಯವರಿಗೆ ನಾವೂ ಯಾವಾಗಲೂ ಚಿರಋಣಿಯಾಗಿರ್ತೀವಿ. ನಿಮಗೂ ಕೂಡಾ ಯಾವುದೇ ಕಷ್ಟಕರವಾದ ಸಮಸ್ಯೆಗಳಿದ್ರೂ ನೇರವಾಗಿ ಗುರೂಜಿಯವರನ್ನು ಭೇಟಿ ಮಾಡಿ ನಿಮ್ಮೆಲ್ಲಾ ಸಮಸ್ಯೆಗಳಿಗೂ ಶಾಶ್ವತ ಪರಿಹಾರ ಪಡ್ಕೊಂಡು ನಮ್ಮ ಹಾಗೆ ನೀವೂ ಕೂಡಾ ನೆಮ್ಮದಿಯಾಗಿ ಜೀವನ ಮಾಡ್ತೀರಾ ಅಂತ ನಂಬಿಕೆಯಿಂದ ಹೇಳ್ತಾ ಇದ್ದೇವೆ.

ಗುರೂಜಿಯವರ ಮನೆ ವಿಳಾಸ # 1191, ಶ್ರೀ ಅಷ್ಟಲಕ್ಷ್ಮೀ ಜ್ಯೋತಿಷ್ಯ ಮಂದಿರ ಜಯನಗರ 9ನೇ ಬ್ಲಾಕ್, ರಾಗಿಗುಡ್ಡ ಬಸ್‌ಸ್ಟಾಪ್ ಆರ್ಚ್ ಎದುರುಗಡೆ ಮಾರ್ಕೆಟ್ ರೋಡ್, ರಾಘವೇಂದ್ರ ಉಪಹಾರ ಎದುರುಗಡೆ, ಅಪೋಲೊ ಫಾರ್ಮಸಿ ಮೇಲೆ, ಬೆಂಗಳೂರು

**9880445522, 8884889444**